
# ಹೂ ಮಾರುವವಳು




ದಿನವಿಡೀ ಕುಣಿದು ಹೊಟ್ಟೆಯ ತಾಳಕ್ಕೆ
ಮನೆಗೆ ದಣಿದು ಬರುವ ಮೊದಲು
ಮುಸ್ಸಂಜೆಯಲ್ಲಿ 'ಹುವ್ವೋ!' ಎಂದರಚಿ
ಹಬ್ಬಿದಾ ಮೃದು ಮೌನಕ್ಕೆ ಬರೆ ಇಡುವವಳು
ಹೂ ಮಾರುವವಳು

ರಾತ್ರಿಯಿಡೀ ಹಸಿದು ಸಾಯುವ ಆಸೆಗಳಿಗೆ
ಒಂದೊಂದೇ ಕನಸ ಪೆಪ್ಪರಮೆಂಟನ್ನು ಕೊಟ್ಟು
ಮಲಗಿಸಿಯೂ, ತಾ ಹಸಿದವಳು
ಹೂ ಮಾರುವವಳು

ಆಕಾಶದ ಚಪ್ಪರಕ್ಕೆ ತೂಗಿ ಬಿದ್ದ
ನಕ್ಷತ್ರಗಳನ್ನು ಕಿತ್ತು ಮಡಿಲು ತುಂಬಿದರೂ
ಒಂದನ್ನೂ ತಾ ಮುಡಿಯಲಾರದವಳು
ಕಣ್ಣಲ್ಲಿ ಬರಿಯ ಕುಡಿ ಮಿಂಚು ಮುಡಿದವಳು

ಆಯ್ದು ಪೋಣಿಸಿದಳು ಜತನದಿಂದ
ಆಯ್ದ ಬದುಕು ತನ್ನದಾಗದ ಭಾಗ್ಯ ನೆನೆದು
ಹೂ ಕಟ್ಟಲೆಂದೇ ತನ್ನ ಆಯ್ದು ಕಳಿಸಿದನೇ ಭಗವಂತ?
ಬಿಟ್ಟ ನಿಟ್ಟುಸಿರ ಎಳೆಯಲ್ಲೇ ಹೂ ಮಾಲೆ ಕಟ್ಟುವವಳು

ಅವಳ ಸೀರೆಗೆ ಹರುಕೇ ಅಲಂಕಾರ
ಮುರುಕು ಆಟಿಕೆಯೇ ಸರ್ವಸ್ವ ಅವಳ ಮಕ್ಕಳಿಗೆ
ಕಂಗಳೊಳಗೆ ಹೊಳೆವ ಚೂಪು ಛಲವೊಂದರಲ್ಲೇ
ಬಂದ ಕಷ್ಟವನೆಲ್ಲ ತರಿದುಹಾಕುವವಳು

ಅವಳ ಮನೆಯ ದೇವರಿಗೆ ಹೂವಿಲ್ಲ
ಬಡವೆಯ ಭಕ್ತಿಯೊಂದೆ ಒಡವೆ ಆ ದೇವರಿಗೆ
ಆದರೇನು
ಊರಿನೆಲ್ಲರ ದೇವರ ಮಾನ ಕಾಯ್ದು
ಮೇಲೇರಿದವಳು
ಹೂ ಮಾರಿ ಅವಳು.

●ಸ್ವಯಂಪ್ರಭಾ ಹೆಗಡೆ